# ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಂ. ಕವಿವಿ/ಉದ್ಯಾನ/2022-23/ ದಿನಾಂಕ: 16-6-22

**ಸುತ್ತೋಲೆ**

**2022-23ನೇ ಸಾಲಿನ ವಿವಿದ ಪಸಲುಗಳಿಗೆ ಮತ್ತು ಕಟ್ಟಿಗೆ ಗುಂಪು ಲಾಟ ನಂ. 1 ಕ್ಕೆ ಕೊಟೇಶನ ಸಲ್ಲಿಸುವ ಕುರಿತು**

| ಅ. ನಂ | ಪಸಲು ವಿವರಣೆ | ಸುರಕ್ಷಾ ಠೇವಣಿ |
|---|---|---|
| 1 | **ಕವಿವಿ ಆವರಣದ ಪೇರಲ ತೋಟ ಲಕನೌ–171+ ಜವಾರಿ 109** | **1000=00** |
| 2 | **ಕವಿವಿ ಆವರಣದ ಚಿಕ್ಕು –87** | **1000=00** |
| 3 | **ಸಸ್ಸೂದ್ಯಾನದ ತೆಂಗು–32** | **500=00** |
| 4 | **ಕರ್ನಾಟಕ ಕಾಲೇಜು ಮತ್ತು ಇತರೇ ಅಂಗ ಸಂಸ್ಥೆಗಳಲ್ಲಿರುವ ತೆಂಗು–22** | **1000=00** |
| 4 | **ಕಟ್ಟಿಗೆ ಗುಂಪು ಲಾಟ ನಂ. 1** | **500=00** |

ಮೇಲೆ ತಿಳಿಸಿದ ಪಸಲುಗಳಿಗೆ ದಿನಾಂಕ : **24-6-22** ರಂದು **4.30** ಗಂಟೆಗೆ ಒಳಗಾಗಿ ಕುಲಸಚಿವರ ಕಾರ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ವಿವಿದ ಫಸಲುಗಳನ್ನು ಮತ್ತು ಕಟ್ಟಿಗೆ ಗುಂಪು ಲಾಟ ನಂ. 1ನ್ನು ಚನ್ನಾಗಿ ಗುರುತಿಸಿಕೊಂಡು ಲಿಕಿತ ರೂಪದಲ್ಲಿ ತಮಗೆ ಬೇಕಾದ ಪಸಲಿಗೆ/ಕಟ್ಟಿಗೆ ಗುಂಪಿಗೆ ತಮ್ಮ ವಿಳಾಸ, ಮೋಬೈಲ್ ನಂಬರ ಮತ್ತು ಪ್ರತಿ ಪಸಲಿಗೆ ಪ್ರತ್ಯೇಕವಾಗಿ ದರ ನಮೂದಿಸಿ ತಮ್ಮ ಸಹಿಯೊಂದಿಗೆ ಸೀಲು ಮಾಡಿದ ಲಕೋಟೆಯಲ್ಲಿ ನಿಗದಿ ಪಡಿಸಿದ ಬಾಕ್ಸನಲ್ಲಿ ಹಾಕಬೇಕು. **ಪೋಸ್ಟ್ ಮುಕಾಂತರ ಬಂದ ಪತ್ರಗಳನ್ನು ಸ್ವೀಕರಿಸುವದಿಲ್ಲಾ(ಪರಿಗಣಿಸುವದಿಲ್ಲಾ).** ಸೀಲು ಮಾಡಿದ ಬಾಕ್ಸನ್ನು ದಿನಾಂಕ **24-6-22** ರಂದು ಮುಂಜಾನೆ **11.00 ಗಂಟೆಯಿಂದ ಮಧ್ಯಾಹ್ನ 4.30** ಗಂಟೆಯವರೆಗೆ ಕುಲಸಚಿವರು ಕಾರ್ಯಾಲಯದಲ್ಲಿ ಇಡಲಾಗುವದು. ಅವದಿ ಮೀರಿ ಬಂದಂತಾ ಕೊಟೇಶನ್ ಗಳನ್ನು ಸ್ವೀಕರಿಸುವದಿಲ್ಲಾ. ತದನಂತರ **4.30** ಗಂಟೆಯ ನಂತರ ಮೇಲಾಧಿಕಾರಿಗಳು ಅನುಮತಿ ನೀಡಿದ ನಂತರ ಅವರ ಸಮ್ಮುಕದಲ್ಲಿ ತೆರೆದು ಕ್ರಮ ಕೈಕೊಳ್ಳಲಾಗುವದು. **ಪೆಟ್ಟಿಗೆ ತೆರೆಯುವ ಸಮಯದಲ್ಲಿ ಬೇಡಿಕೆ ಸಲ್ಲಿಸಿದವರು ಕಡ್ಡಾಯವಾಗಿ ಇರತಕ್ಕದ್ದು. ಇಲ್ಲದೆ ಹೋದಲ್ಲಿ ತಾವು ಸಲ್ಲಿಸಿದ ಬೇಡಿಕೆಯನ್ನು ಪರಿಗಣಿಸುವದಿಲ್ಲಾ.** ತಮ್ಮ ಬೇಡಿಕೆ ಹಣ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಅದೇ ದಿನ ಪೂರ್ಣ ಹಣ ಮತ್ತು ಸುರಕ್ಷಾ ಠೇವಣಿ ಸಂದಾಯಮಾಡಬೇಕು. ತದನಂತರ ಮಾಲನ್ನು ತಮ್ಮ ವಶಕ್ಕೆ ಕೊಡಲಾಗುವದು. ಕಟ್ಟಿಗೆ ಗುಂಪನ್ನು ತೆಗೆದುಕೊಂಡವರು ಕಡ್ಡಾಯವಾಗಿ ಸರಕಾರಕ್ಕೆ ತುಂಬಬೇಕಾದ ತೆರಿಗೆಗಳನ್ನು ತುಂಬಿ ಡಿಡಿ ಮತ್ತು ಚಲನ ಪ್ರತಿಯನ್ನು ಉದ್ಯಾನ ವಿಭಾಗಕ್ಕೆ ಸಲ್ಲಿಸಿ ಅರಣ್ಯ ಇಲಾಖೆ ಪಾಸ ಪಡೆದು ಮಾಲು ಸಾಗಿಸಬೇಕು. ಯಾವುದೇ ಕಾರಣಕ್ಕೂ ಮೇಲಾಧಿಕಾರಿಗಳ ಆದೇಶವಿಲ್ಲದೆ ಮಾಲು ಮುಟ್ಟತಕ್ಕದ್ದಲ್ಲಾ. **ಸದರ ಫಸಲುಗಳಿಗೆ ಯೋಗ್ಯ ಧಾರಣಿ ಬಾರದಿದ್ದಲ್ಲಿ ಮೇಲಾಧಿಕಾರಿಗಳು ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಪಸಲನ್ನು ಕೊಡುವ ಅಥವಾ ನಿರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.** ಪಸಲು ವಿಲೇವಾರಿಗೆ ಸಂಬಂಧಿಸಿದಂತೆ ಏನಾದರು ಸಮಸ್ಯಗಳಿದ್ದಲ್ಲಿ ಮೇಲಾಧಿಕಾರಿಗಳು ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಪಸಲನ್ನು ತೆಗೆಯುವಾಗ ವಿಶ್ವವಿದ್ಯಾಲಯಕ್ಕೆ ಏನಾದರು ಹಾನಿಯಾದಲ್ಲಿ ತಾವೇ ತುಂಬಿ ಕೊಡಬೇಕು. ಮತ್ತು ಏನಾದರು ಅನಾಹುತವಾದಲ್ಲಿ ತಾವೇ ಜವಾಬ್ದಾರರು. ಪಸಲನ್ನು ಕೊಂಡವರು ಮಾಲನ್ನು ಅವರೇ ಕಾಯ್ದುಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಉದ್ಯಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಲ್ಲಿ ಆಫೀಸಿನ ಸಮಯದಲ್ಲಿ ವಿಚಾರಿಸಬಹುದು.

ಸಹಿ ಇದೆ

**ಕುಲಸಚಿವರು.**